(3)

# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಂ. ನಾರಾಯಣ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1998

ಉತ್ತರಿಸಬೇಕಾದ ದಿನಾಂಕ : 24.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

| ಕ್ರ.ಸಂ | | ಉತ್ತರಗಳು |
|---|---|---|
| ಅ | ಗೋಹತ್ಯೆ ನಿಷೇಧ ಕಾಯ್ದೆ ಕಾನೂನು ಜಾರಿಗೆ ಬಂದ ನಂತರ ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಗಂಡು ಕರುಗಳನ್ನು ಹುಟ್ಟಿದ ತಕ್ಷಣ ತಾಯಿಯಿಂದ ಬೇರ್ಪಡಿಸಿ, ಗೋಶಾಲೆಗಳ ಮುಂದೆ ಮತ್ತು ಅರಣ್ಯಗಳಲ್ಲಿ ಬಿಟ್ಟು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ | ಕರುಗಳನ್ನು ನಿರ್ವಹಣೆ ಮಾಡಲು ರೈತರಿಗೆ ಪ್ರತಿದಿನ 150 ರಿಂದ 200 ರೂಪಾಯಿಗಳವರೆಗೆ ವೆಚ್ಚವಾಗುತ್ತಿದ್ದು, ರೈತರಿಗೆ ಸರ್ಕಾರದಿಂದ ಗಂಡು ಕರುಗಳ ನಿರ್ವಹಣೆಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆಯೇ; | ರೈತರ ಕರುಗಳ ನಿರ್ವಹಣೆಗೆ ಯಾವುದೇ ನಿರ್ವಹಣಾ ವೆಚ್ಚ ನೀಡುತ್ತಿಲ್ಲ. ರೈತರು ತಮ್ಮ ಗಂಡು ಕರುಗಳನ್ನು ಹತ್ತಿರದ ಗೋಶಾಲೆಗೆ ಬಿಡಬಹುದಾಗಿದೆ. |
| ಇ | ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದ ನಂತರ ಎಷ್ಟು ಕರುಗಳನ್ನು ಗೋಶಾಲೆಗಳಿಗೆ ಬಿಡಲಾಗಿದೆ; ಸರ್ಕಾರದಿಂದ ಎಷ್ಟು ಗೋಶಾಲೆಗಳನ್ನು ಕರುಗಳ ನಿರ್ವಹಣೆಗಾಗಿ ತೆರೆಯಲಾಗಿದೆ? (ಮಾಹಿತಿ ನೀಡುವುದು) | ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದ ನಂತರ 31 ಕರುಗಳನ್ನು ಗೋಶಾಲೆಗಳಿಗೆ ಬಿಡಲಾಗಿದೆ. ಕರುಗಳ ನಿರ್ವಹಣೆಗಾಗಿ ಪ್ರತ್ಯೇಕವಾಗಿ ಗೋಶಾಲೆ ತೆರೆದಿರುವುದಿಲ್ಲ. |

ಪಸಂಮೀ ಇ–122 ಸಲೆವಿ 2021

(ಸಹಿ)
ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು